ಅಸಲು ದಾವೆ ನಂಃ 100/2021 ಪಿ.ಡಬ್ಲ್ಯೂಃ 2 ಶರೀಫ್ ಸಾಬ ತಂದೆ ಮಲ್ಲಿಕ್ ಸಾಬ ಪಿಂಜಾರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 05/08/2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ LNB ವಕೀಲರಿಂದಃ**

1. ನಾನು ವ್ಯವಸಾಯವನ್ನು ಮಾಡುತ್ತೇನೆ. ನಾನು 20-25 ವರ್ಷಗಳ ಹಿಂದೆ ವ್ಯಾಪಾರವನ್ನು ಮೆಣಸಗಿ ಗ್ರಾಮದಲ್ಲಿ ಪ್ರತಿವಾದಿಯವರ ಕಾಂಪ್ಲೇಕ್ಸನಲ್ಲಿ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರವನ್ನು ಮಾಡುತ್ತಿದ್ದೆ. ನಾನು ದಾವಾ ಆಸ್ತಿಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಹಳೆಯ ಸರ್ವೇ ನಂಬರ 319/3 ಇತ್ತು. ಸದರಿ ಸರ್ವೇ ನಂಬರ 319/3 ಅಲ್ಲ ಎಂದರೆ ಸಾಕ್ಷಿಯು ನನಗೆ ಹಳೆಯ ಸರ್ವೆ ನಂಬರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ಪ್ರತಿವಾದಿಯ ತಂದೆ 1962 ರಲ್ಲಿ ಇಮಾಮಸಾಬ ರವರಿಂದ ನೊಂದಣಿ ಖರೀದಿ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸರಿ. 1962 ರಿಂದ 1980 ರತನಕ ಪ್ರತಿವಾದಿಯ ತಂದೆಯವರೇ ಸದರಿ ಆಸ್ತಿಯಲ್ಲಿ ಮಾಲೀಕರಾಗಿದ್ದರು ಎಂದರೆ ಸರಿ. 1980 ರಲ್ಲಿ ಗೋವಿಂದಪ್ಪರವರಿಗೆ ವಯಸ್ಸಾಗಿದ್ದರಿಂದ ಅವರ ಮಗನಾದ ಪ್ರತಿವಾದಿಯವರ ಹೆಸರಿನಲ್ಲಿ ಸದರಿ ಆಸ್ತಿಯನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. 1980 ರಿಂದ ಇಲ್ಲಿಯವರೆಗೆ ಪ್ರತಿವಾದಿಯವರೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದುಕೊಂಡು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಪಕ್ಕದಲ್ಲಿ ನನ್ನ ಜಮೀನು ಇರುತ್ತದೆ ಎಂದರೆ ಸರಿ. 1962 ರಿಂದ ಇಲ್ಲಿಯವರೆಗೆ ಪ್ರತಿವಾದಿ ತಂದೆ ಮತ್ತು ಪ್ರತಿವಾದಿಯೇ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಇಮಾಮಸಾಬ, ಬುಡ್ಡೆಸಾಬ, ಯಮನೂರುಸಾಬ ರವರು ಖರೀದಿಗೆ ನೀಡಿರುತ್ತಾರೆಂದು ಇರುತ್ತದೆ. ಆ ಸಂಧರ್ಭದಲ್ಲಿ ಯಮನೂರುಸಾಬ ರವರು ಜನಿಸಿರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ನನ್ನ ಜನ್ಮ ವರ್ಷ 1956 ಆಗಿರುತ್ತದೆ. ಇಮಾಮಸಾಬ, ಬುಡ್ಡೆಸಾಬ, ಯಮನೂರುಸಾಬರವರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅವರು ನಮ್ಮ ಪಕ್ಕದ ಮನೆಯವರು. ಇಮಾಮಸಾಬ ರವರು ಯಾವ ದಿನಾಂಕದಂದು ನಿಧನರಾಗಿರುತ್ತಾರೆಂದು ನನಗೆ ಗೊತ್ತಿಲ್ಲ. ಇಮಾಮಸಾಬ ರವರು 1970 ರಲ್ಲಿ ನಿಧನರಾಗಿರುತ್ತಾರೆಂದರೆ ಸರಿ. ಇಮಾಮಸಾಬರವರಿಗೆ ಖಾಸಿಂಬಿ ಎಂಬ ಹೆಂಡತಿ ಮತ್ತು ಮೂರು ಜನ ಮಕ್ಕಳಾದ 1)ಬುಡ್ಡೆಸಾಬ 2) ಫೀರಸಾಬ 3) ಅಮೀನ್ ಬಿ ಎಂಬ ಮಕ್ಕಳು ಇರುತ್ತಾರೆ. ಸದರಿಯವರಲ್ಲಿ ಬುಡ್ಡೆಸಾಬರವರು ನಿಧನರಾಗಿರುತ್ತಾರೆ. ಬುಡ್ಡೆಸಾಬರವರಿಗೆ ಮದುವೆಯಾಗಿರಲಿಲ್ಲ ಎಂದರೆ ಸರಿ. ದಾವಾ ಆಸ್ತಿ ವಾದಿಯವರ ವಂಶಕ್ಕೆ ಸಂಬಂಧಿಸಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಯವರು ಖರೀದಿ ಮಾಡಿರುವ ವಿಷಯ ನನಗೆ ಗೊತ್ತಿಲ್ಲ, ಆಗ ನಾನು ಇನ್ನು ಚಿಕ್ಕವನು ಎಂದು ಸಾಕ್ಷಿ ನುಡಿದಿರುತ್ತಾರೆ. ನನಗೆ ತಿಳುವಳಿಕೆ ಬಂದಾಗಿನಿಂದ ದಾವಾ ಆಸ್ತಿಯನ್ನು ಪ್ರತಿವಾದಿಯವರೇ ಸ್ವಾಧೀನದಲ್ಲಿ ಇದ್ದುಕೊಂಡು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆಂದರೆ ಸರಿ. ನನಗೆ ದಾವಾ ಆಸ್ತಿಯ ಬಗ್ಗೆ ತಕರಾರು ಇರುವುದು ವಾದಿಯವರು ದಾವೆಯನ್ನು ದಾಖಲು ಮಾಡಿದ ನಂತರ ತಿಳಿದು ಬಂದಿರುತ್ತದೆ. 1962 ರಿಂದ ದಾವಾ ಆಸ್ತಿಯಲ್ಲಿ ಪ್ರತಿವಾದಿಯವರು ಮಾಲೀಕರಾಗಿದ್ದುಕೊಂಡು ಸ್ವಾಧೀನದಲ್ಲಿ ಇರುವ ಸಂಗತಿ ನನಗೆ ತಿಳಿದಿದ್ದರೂ ಸಹ

ವಾದಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯು ವಾದಿಯವರಿಗೆ ಸಂಬಂಧಿಸಿರುತ್ತದೆ ಎಂದು ಸುಳ್ಳು ಬರೆಸಿರುತ್ತೇನೆಂದರೆ ಸರಿಯಲ್ಲ. ವಾದಿಯವರು ಇಮಾಮಸಾಬ ವಂಶಸ್ಥರು ಎಂದು ಸಾಭೀತುಪಡಿಸಲು ನಾನು ವಾದಿಯವರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರ ಸಂಖ್ಯೆ 3 ರಲ್ಲಿ ಇರುವ ಮಾಹಿತಿಯನ್ನು ನಾನು ಬರೆಸಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರ ಸಂಖ್ಯೆ 3 ರಲ್ಲಿ ಪ್ರತಿವಾದಿಯು ಮಾಲೀಕರಲ್ಲ ಎಂದು ಸುಳ್ಳು ಬರೆಸಿರುತ್ತೇನೆಂದರೆ ಸಾಕ್ಷಿಯು ದಾವಾ ಆಸ್ತಿಗೆ ಪ್ರತಿವಾದಿಯವರೇ ಮಾಲೀಕರಾಗಿರುತ್ತಾರೆಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಬಗ್ಗೆ ಮತ್ತು ವಾದಿಯವರ ವಂಶಸ್ಥರ ಬಗ್ಗೆ ನನಗೆ ಸಂಪೂರ್ಣವಾಗಿ ಮಾಹಿತಿ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.ದಾವಾ ಆಸ್ತಿಯಲ್ಲಿ ಯಾವುದೇ ತಂಟೆ ತಕರಾರು ಇಲ್ಲದೇ ಇಲ್ಲಿಯವರೆಗೆ ಪ್ರತಿವಾದಿಯವರು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.